ಪುಸ್ತಕಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ಗ್ರಂಥಾಲಯಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಓದಿನ ಜೊತೆಗೆ ಅಂತರ್ಜಾಲ ವಿಭಾಗ, ಮಕ್ಕಳ ವಿಭಾಗ, ಸ್ಪರ್ಧಾತ್ಮಕ ಪರೀಕ್ಷಾ ಅಧ್ಯಯನ ವಿಭಾಗ, ಮಹಿಳಾ ವಿಭಾಗ, ಇತ್ಯಾದಿ ವಿವಿಧ ವಿಭಾಗಗಳನ್ನು ತೆರೆದು ಗ್ರಂಥಾಲಯದೆಡೆಗೆ ಓದುಗರನ್ನು ಸೆಳೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ)

1. ಬಾಕಿ ಇರುವ ಗ್ರಂಥಾಲಯ ಕರ ಅಂದಾಜು ₹ 249.50 ಕೋಟಿಗಳು.

2. ಬಿ.ಬಿ.ಎಂ.ಪಿ. ಸಂಗ್ರಹಿಸುವ ಗ್ರಂಥಾಲಯ ತೆರಿಗೆಯನ್ನು ನೇರವಾಗಿ ಗ್ರಂಥಾಲಯ ಇಲಾಖೆಯ ಬ್ಯಾಂಕ್ ಖಾತೆಗೆ ಜಮಾ ಮಾಡುವಂತೆ ನಗರಾಭಿವೃದ್ಧಿ ಇಲಾಖೆಯನ್ನು ಕೋರಲಾಗಿದೆ.

ಹಂಪಿ ವಿಶ್ವವಿದ್ಯಾಲಯದಲ್ಲಿ ನೇಮಕಾತಿ

2585(2971); ಶ್ರೀ ಇಕ್ಬಾಲ್ ಅನ್ಸಾರಿ (ಗಂಗಾವತಿ)

ಅ) ಹಂಪಿ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು? ಈ ಪೈಕಿ ಭರ್ತಿ ಮಾಡಿರುವ ಹುದ್ದೆಗಳ ಸಂಖ್ಯೆ ಎಷ್ಟು? (ವೃಂದವಾರು ವಿವರ ನೀಡುವುದು)

ಆ) ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಇ) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಮೀಸಲಾತಿ ಅನುಸರಿಸಲಾಗಿದೆಯೇ (ವಿವರ ನೀಡುವುದು);

ಈ) ಇತ್ತೀಚೆಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಮೀಸಲಿಟ್ಟ ಹುದ್ದೆಗಳನ್ನು ಬೇರೆ ವರ್ಗದವರಿಗೆ ಮುಂಬಡ್ತಿಗಾಗಿ ಪರಿಗಣಿಸಿರುವ ಕುರಿತು ದೂರುಗಳೇನಾದರೂ ಬಂದಿದೆಯೇ; ಬಂದಿದ್ದಲ್ಲಿ, ವಿವರ ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) **ಹಂಪಿ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ: 268**

ಈ ಪೈಕಿ ಭರ್ತಿ ಮಾಡಿರುವ ಹುದ್ದೆಗಳ ಸಂಖ್ಯೆ: 231

ಬೋಧಕ ವರ್ಗ:

1)	ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು	–07
2)	ಸಹ ಪ್ರಾಧ್ಯಾಪಕರ ಹುದ್ದೆಗಳು	–32
3)	ಪ್ರಾಧ್ಯಾಪಕರ ಹುದ್ದೆಗಳು	–19
4)	ಉಪ ಗ್ರಂಥಪಾಲಕರು	–01
5)	ಸಹಾಯಕ ಗ್ರಂಥಪಾಲಕರು	–02
	ಒಟ್ಟು	**–61 ಹುದ್ದೆಗಳು**

ಬೋಧಕೇತರ ವರ್ಗ:

1)	ಎ ಗ್ರೂಪ್ ಹುದ್ದೆಗಳು	– 08
2)	ಬಿ ಗ್ರೂಪ್ ಹುದ್ದೆಗಳು	– 13
3)	ಸಿ ಗ್ರೂಪ್ ಹುದ್ದೆಗಳು	– 61
4)	ಡಿ ಗ್ರೂಪ್ ಹುದ್ದೆಗಳು	– 88
	ಒಟ್ಟು	**– 170 ಹುದ್ದೆಗಳು**

ಆ) ಅನುಸೂಚಿತ ಜಾತಿಯ ಅಧಿಕಾರಿ/ಸಿಬ್ಬಂದಿಗಳ

ಒಟ್ಟು ಸಂಖ್ಯೆ: 19

ಅನುಸೂಚಿತ ಪಂಗಡದ ಅಧಿಕಾರಿ/ಸಿಬ್ಬಂದಿ

ಒಟ್ಟು ಸಂಖ್ಯೆ: 45

ಇ) ಹೌದು

ಬೋಧಕೇತರ ವರ್ಗದಲ್ಲಿ ಅನುಸೂಚಿತ ಜಾತಿಯ

ಅಧಿಕಾರಿ/ಸಿಬ್ಬಂದಿಗಳ ಒಟ್ಟು ಸಂಖ್ಯೆ: 19 ಹುದ್ದೆಗಳು

ಬೋಧಕೇತರ ವರ್ಗದಲ್ಲಿ ಅನುಸೂಚಿತ ಪಂಗಡದ

ಅಧಿಕಾರಿ/ಸಿಬ್ಬಂದಿ ಒಟ್ಟು ಸಂಖ್ಯೆ: 45 ಹುದ್ದೆಗಳು

ಈ) ಬಂದಿರುವುದಿಲ್ಲ

ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನದ ಬಳಕೆ

2586(1632); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಕಳೆದಮೂರು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ (ಎಸ್.ಸಿ.ಪಿ/ಟಿ.ಎಸ್.ಪಿ) ಯೋಜನೆಯಡಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸಲಾಗಿದೆಯೇ (ಕ್ಷೇತ್ರವಾರು ಮಾಹಿತಿ ಒದಗಿಸುವುದು);

ಆ) ಇಲಾಖೆಗೆ ಬಿಡುಗಡೆಯಾಗಿರುವ ಮತ್ತು ಬಳಕೆಯಾಗಿರುವ ಅನುದಾನ ಎಷ್ಟು ಮಾಹಿತಿ ಒದಗಿಸುವುದು;

ಇ) ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳೇನು;